# ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಡಾ: ಬಿ. ಕೆ. ದೇಸಾಯಿ
**ಸಂಶೋಧನಾ ನಿರ್ದೇಶಕರು** ಹಾಗೂ
ಸಿರಿಧಾನ್ಯ ಸಮಾವೇಶದ ಸಂಘಟನಾ ಕಾರ್ಯದರ್ಶಿ
ಮೊಬೈಲ್ ಸಂ : 9480696304
ಮಿಂಚಂಚೆ: druasr@rediffmail.com

ಸಂಶೋಧನಾ ನಿರ್ದೇಶನಾಲಯ
ರಾಯಚೂರು – 584 104
ಫ್ಯಾಕ್ಸ್ ಸಂ: 08532 – 220181
ದೂರವಾಣಿ : 08532 – 220154

ಸಂ: ಸಂ.ನಿ./ಕೃವಿವಿರಾ/ 2025/2022-23

ದಿನಾಂಕ: 18-08-2022

## ಸುತ್ತೋಲೆ

**ವಿಷಯ:** ಕೃ.ವಿ.ವಿ., ರಾಯಚೂರಿನಲ್ಲಿ "ಸಿರಿಧಾನ್ಯ ಸಮಾವೇಶ" ಆಯೋಜಿಸುವ ಕುರಿತು.

**ಉಲ್ಲೇಖ:** 1. ಕೇಂದ್ರ ಹಣಕಾಸು ಸಚಿವಾಲಯದ ಪತ್ರ ಸಂಖ್ಯೆ: 3/47/2022-AC ದಿನಾಂಕ: **05.08.2022**
2. ಮಾನ್ಯ ಕುಲಪತಿಗಳು, ಕೃವಿವಿ, ರಾಯಚೂರು ಇವರ ಅನುಮೋದನೆ

<<<**<<*<<>>*<<**

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು **26 ಮತ್ತು 27ನೇ ಅಗಸ್ಟ್ 2022** ರಂದು "**ಸಿರಿಧಾನ್ಯ ಸಮಾವೇಶ**"ವನ್ನು (Millet Conclave-2022) ನಬಾರ್ಡ್ ಹಾಗೂ ಕೃಷಿಗೆ ಸಂಬಂಧಪಟ್ಟ ಇಲಾಖೆಗಳ ಸಹಯೋಗದೊಂದಿಗೆ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಏರ್ಪಡಿಸುತ್ತಿದೆ. ಸದರಿ ಸಮಾವೇಶವನ್ನು ಕೇಂದ್ರ ಸರ್ಕಾರದ ಸನ್ಮಾನ್ಯ ಹಣಕಾಸು ಸಚಿವರಾದ **ಶ್ರೀಮತಿ ನಿರ್ಮಲಾ ಸೀತಾರಾಮನ್** ರವರು ದಿನಾಂಕ **27ನೇ ಅಗಸ್ಟ್ 2022** ರಂದು ಉದ್ಘಾಟಿಸಿ "ಸಿರಿಧಾನ್ಯ" ಉತ್ಪಾದನೆ ಮತ್ತು ಮೌಲ್ಯಾವರ್ಧನೆಗೆ ಸಂಬಂಧಿಸಿದಂತೆ ರೈತರಿಗೆ, ಸಿರಿಧಾನ್ಯ ಉದ್ದಿಮೆದಾರರು, ಪ್ರಾರಂಭದಾರರು (Agri-startup), ರೈತ ಉತ್ಪಾಧಕರ ಸಂಘಗಳು, ಹೂಡಿಕೆದಾರರು, ರಫ್ತುದಾರರು, ಕೃಷಿ ತಜ್ಞರು, ಬ್ಯಾಂಕ್ ಸಿಬ್ಬಂದಿ ಮತ್ತು ಸಂಬಂಧಿಸಿದ ಇಲಾಖೆ ಅಧಿಕಾರಿಗಳೊಂದಿಗೆ ಸಮಗ್ರವಾಗಿ ಚರ್ಚಿಸುವರು.

ಈ ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಸನ್ಮಾನ್ಯ ಕೃಷಿ ಮಂತ್ರಿಗಳಾದ ಶ್ರೀ ನರೇಂದ್ರ ಸಿಂಗ್ ತೋಮರ್, ಕೇಂದ್ರ ಸರಕಾರದ ಸನ್ಮಾನ್ಯ ರಾಜ್ಯ ಕೃಷಿ ಮಂತ್ರಿಗಳಾದ ಕು. ಶೋಭಾ ಕರಂದ್ಲಾಜೆ ಹಾಗೂ ಕರ್ನಾಟಕದ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ರವರು, ಸನ್ಮಾನ್ಯ ಕೃಷಿ ಸಚಿವರಾದ ಶ್ರೀ ಬಿ.ಸಿ. ಪಾಟೀಲ್‌ರವರು, ಸನ್ಮಾನ್ಯ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಂಕರ ಪಾಟೀಲ್ ಮುನೇನಕೊಪ್ಪ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿರುವರು.

ಸದರಿ ಸಮಾವೇಶದಲ್ಲಿ ಸುಮಾರು 50ಕ್ಕಿಂತಲೂ ಹೆಚ್ಚು ಸಿರಿಧಾನ್ಯಗಳಿಗೆ ಸಂಬಂಧಿಸಿದ ವಸ್ತುಪ್ರದರ್ಶನದ ಮಳಿಗೆಗಳನ್ನು ವಿಶ್ವವಿದ್ಯಾಲಯದ ಗ್ರಂಥಾಲಯದ ಮುಂದೆ ಹಾಕಲಾಗುವುದು ಹಾಗೂ ಈ ಕಾರ್ಯಕ್ರಮಕ್ಕೆ ಸುಮಾರು 600 ರೈತ/ವಿಜ್ಞಾನಿಗಳು ಸೇರಿದಂತೆ ಅನೇಕರು ಭಾಗವಹಿಸುವರು. ಆದ್ದರಿಂದ, ಸದರಿ ವಿಷಯವನ್ನು ತಮ್ಮ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ತಿಳಿಪಡಿಸುತ್ತಾ, ತಮ್ಮೆಲ್ಲರಿಂದ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸಲಾಗುತ್ತದೆ. ತಾವುಗಳು ಕೂಡ ಈ ಸಮಾವೇಶದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ತಮ್ಮೆಲ್ಲರಲ್ಲಿ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

B.K. Desai

**ಸಂಶೋಧನಾ ನಿರ್ದೇಶಕರು** ಹಾಗೂ
ಸಿರಿಧಾನ್ಯ ಸಮಾವೇಶದ ಸಂಘಟನಾ ಕಾರ್ಯದರ್ಶಿ

ಸಂಶೋಧನಾ ನಿರ್ದೇಶಕರು
ಕೃಷಿ ವಿಶ್ವವಿದ್ಯಾಲಯ,
ರಾಯಚೂರು -584102

Scanned with CamScanner

ಆ.ಮೂರ್ವಕವಾಗಿ:

1. ಕುಲಪತಿಗಳವರ ಕಾರ್ಯದರ್ಶಿ, ಕೃವಿವಿ, ರಾಯಚೂರು

ಪ್ರತಿಯನ್ನು ಮಾಹಿತಿಗಾಗಿ :

1. ಶಿಕ್ಷಣ ನಿರ್ದೇಶಕರು, ಕೃ.ವಿ.ವಿ., ರಾಯಚೂರು
2. ಸಂಶೋಧನಾ ನಿರ್ದೇಶಕರು, ಕೃವಿವಿ, ರಾಯಚೂರು
3. ಕುಲಸಚಿವರು, ಕೃವಿವಿ, ರಾಯಚೂರು
4. ಡೀನ್ (ಪಿಜಿಎಸ್), / ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ), ಕೃವಿವಿ, ರಾಯಚೂರು
5. ಡೀನ್ (ಕೃಷಿ), ಕೃಮವಿ, ರಾಯಚೂರು /ಭೀಮರಾಯನಗುಡಿ/ಕಲಬುರಗಿ ಹಾಗೂ ಡೀನ್ (ಕೃತಾಂ), ಕೃ.ತಾಂ.ವಿ., ರಾಯಚೂರು / ವಿಶೇಷಾಧಿಕಾರಿಗಳು, ಕೃ.ಮ.ವಿ., ಗಂಗಾವತಿ / ಅ
6. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳು
7. ಸಹ ಸಂಶೋಧನಾ ನಿರ್ದೇಶಕರು, ಪ್ರಾ. ಕೃ. ಸಂ. ಕೇಂದ್ರ, ರಾಯಚೂರು/ಕಲಬುರಗಿ
8. ಹಣಕಾಸು ನಿಯಂತ್ರಣಾಧಿಕಾರಿಗಳು / ಸಾರ್ವಜನಿಕ ಸಂಪರ್ಕ ಅಧಿಕಾರಿಗಳು / ವಿಶೇಷಾಧಿಕಾರಿಗಳು (ಬೀಜ) /ಆಸ್ತಿ ಅಧಿಕಾರಿಗಳು/ಗ್ರಂಥ ಪಾಲಕರು, ಕೃ.ವಿ.ವಿ. ರಾಯಚೂರು/ಪ್ರಭಾರ ಅಧಿಕಾರಿ, ಕೃಷಿ ಮಹಾ ವಿದ್ಯಾಲಯ ಹಗರಿ(ಬಳ್ಳಾರಿ)
9. ಕೃಷಿ ವಿಜ್ಞಾನ ಕೇಂದ್ರಗಳ ಮುಖ್ಯಸ್ಥರು, ಬೀದರ / ಕಲಬುರಗಿ / ರದ್ದೇವಾಡಗಿ / ಹಗರಿ / ರಾಯಚೂರು/ ಗಂಗಾವತಿ / ಕವಡಿಮಟ್ಟಿ
10. ಕೃ.ವಿ.ಶಿ.ಕೇಂದ್ರಗಳ ಮುಖ್ಯಸ್ಥರು, ಭೀ.ಗುಡಿ/ಕೊಪ್ಪಳ/ಹಡಗಲಿ/ಲಿಂಗಸುಗೂರು/ನಾಲವಾರ/ ದೇವದುರ್ಗ
11. ಕೃಷಿ ಸಂಶೋಧನಾ ಕೇಂದ್ರಗಳ ಮುಖ್ಯಸ್ಥರು / ಕ್ಷೇತ್ರ ಅಧೀಕ್ಷಕರು, ಕೃಷಿ ಸಂಶೋಧನಾ ಕೇಂದ್ರ,
12. ಬೀದರ/ಗುಲಬರ್ಗಾ/ರದ್ದೇವಾಡಗಿ/ಭೀ'ಗುಡಿ/ಕವಡಿಮಟ್ಟಿ/ಮಾಳನೂರು/ಗಂಗಾವತಿ/ಸಿರಗುಪ್ಪ/ಚಿತ್ತಾಪೂರ ಹಗರಿ/ಧಡೇಸುಗೂರು/ಗುಳದಳ್ಳಿ
13. ಕಛೇರಿ ಕಡತಕ್ಕೆ

Scanned with CamScann